ದತ್ತು ವಿವರಿಸಿದ. ಬುಗರಿಯಂತಹ ಕುತ್ರಿಗಳಿದ್ದ ಬಯಲಲ್ಲಿ ದನ ಮೇಯುತ್ತಿವೆ; ತಾನು ಕಾಲೇಜಿಗೆ ಹೋಗುತ್ತಿದ್ದ ಕೊನೆಯ ವರ್ಷ ಅಘನಾಶಿನಿಗೆ ನೆಗಸು ಬಂದು ಬಯಲು ಮುಳುಗಿ ಸಮುದ್ರವಾದದ್ದು ನೆನಪಾಯಿತು; ತಾರಿಬಾಗಿಲ ಎಲ್ಲರೂ ಎರಡು ದಿನ ಮಾದರಿ ಕನ್ನಡ ಶಾಲೆಯ ಗಂಜಿ ಕೇಂದ್ರದಲ್ಲಿದ್ದರು.

ಪುಂಡಲೀಕನ ಅಂಗಡಿ ಪ್ರಾಚೀನ ಕಾಲದ್ದು; ಮುಂದೆ ಅಂಗಡಿ; ಹಿಂದೆ ಮನೆ; ಮೀನು–ತರಕಾರಿ ಊಟವೂ ಇದೆ, ಗಾಜಿನ ಬಾಗಿಲ ಸಾಗವಾನಿ ಕಪಾಟಿನ ಮುಂಗೋಲಿನಲ್ಲಿ ತಕ್ಕಡಿ ತೂಗುವ ದಿನಸಿ ಅಂಗಡಿಯೂ ಹೌದು; ಹಿತ್ತಲ ಮಾಡು ಹಂಚಿನದು; ಮುಂಗಟ್ಟಿಗೆ ಹೆಣೆದ ಮಡ್ಲು ಚಾಪೆಯ ತಟ್ಟಿ ಮತ್ತು ಬಿದಿರು ರೀಪಿನ ಛಾವಣಿ; ಪಕ್ಕದಲ್ಲಿ ಸ್ಥಗಿತ ಎಸ್‌ಟಿಡಿ ಬೂತು; ಅಲುಗಾಡುವ ಮೇಜಿನ ಮೇಲೆ ಲಿಂಬು ಹಣ್ಣುಗಳು, ಕೌಚಿಟ್ಟ ಗ್ಲಾಸುಗಳು, ಸೋಡಾ ಬಾಟ್ಲಿಗಳು; ಕಟ್ಟೆಯುದ್ದಕ್ಕೆ ಅಟ್ಟಲಕಾಯಿ, ಗೇರುಬೀಜ, ಮುರಗಲುಹುಳಿ ತುಂಬಿಟ್ಟ ಬುಟ್ಟಿಗಳು; ಚಿಟ್ಟೆಯ ಕಟ್ಟೆಯ ಮೇಲೆ ಬಣ್ಣದ ಜಾಹೀರಾತಿನ ಚಿತ್ರ ಮತ್ತು ಬರಹ; ಅನಂತನ ಕಾಲೇಜಿನ ದಿನಗಳಲ್ಲಿ ಇದ್ದಂತೆ ಇದೆ; ಬದಲಾಯಿಸಲು ಕಾಲವೇ ಸೋತಿತ್ತು. ಪುಂಡಲೀಕನ ಹೆಂಡತಿ ಬಂಗ್ಲೆಪ್ಪನ ಸ್ಟೆಪಣಿ ಎನ್ನುತ್ತಿದ್ದರು; ಮಾಲು, ಕಾಪು, ಸ್ಟೆಪಣಿ, ತಂಬುಳಿ, ಸೆವೆನ್ ನಂಬರ್ ಮುಂತಾದ ಪಾರಿಭಾಷಿಕ ಎನಿಸುತ್ತಿದ್ದ ಅನ್ಯೋಕ್ತಿ ಪದಗಳನ್ನು ಲೈಂಗಿಕ ಸೂಚಕಗಳನ್ನಾಗಿಯೊ ಜಾತಿವಾಚಕಗಳನ್ನಾಗಿಯೊ ಪ್ರಯೋಗಿಸುತ್ತಿದ್ದದ್ದು ಕಾಲೇಜಿನ ದಿನಗಳಲ್ಲೆ ಅನಂತನಿಗೆ ತಿಳಿದಿತ್ತು. ಅಂಗಡಿಯ ಕಟ್ಟೆಯ ಮೇಲೆ ನಿಂತು ಪುಂಡಲೀಕನ ಇಬ್ಬರು ಹೆಣ್ಣು ಮಕ್ಕಳು ಅನಾದಿಯಿಂದ ವ್ಯಾಪಾರ ಮಾಡುತ್ತಿದ್ದಾರೆ; ನಲವತ್ತು ದಾಟಿದರೂ ಮೊಣಕಾಲವರೆಗಿನ ಸ್ಕರ್ಟ್ ಬಿಡಲಿಲ್ಲ; ಓಣಿ ರಸ್ತೆಯಲ್ಲಿ ವ್ಯಾಪಾರಕ್ಕೆ ನಿಲ್ಲುವ ಗಿರಾಕಿಗಳಿಗೆ ಅವರು ಆಗಾಗ ಬಗ್ಗಿದಾಗ, ಲಜ್ಜೆಗೆಟ್ಟ ಗಾಳಿ ಬೀಸಿದಾಗ ಮೊಣಕಾಲ ಮೇಲಿನ ಗೋಪುರದ ಐಶ್ವರ್ಯ ದರ್ಶನವಾಗುತ್ತದೆ. ಅವರು ಬಂಗ್ಲೆಪ್ಪನವರಿಗೆ ಹುಟ್ಟಿದವರು ಎಂಬ ರುಚಿಕಟ್ಟಾದ ಸಾರ್ವಜನಿಕ ರಹಸ್ಯ ಕ್ರಮೇಣ ಊರಿನ ಅಂಗೀಕೃತ ಕಥಾನಕವಾಯಿತು. ನಿಮಗೇನು ಬೇಕೆನ್ನುವಂತೆ ಹುಬ್ಬೆತ್ತಿ ವಿಚಾರಿಸುತ್ತ ಕೆಳ ತುಟಿ ಕಚ್ಚುತ್ತ ಸಾಮಾನಿನ ಪೇಪರ್ ಕೊಟ್ಟೆಗೆ ನೂಲಿನ ದಾರ ಕಟ್ಟಿ ನಿಂತಲ್ಲೆ ವ್ಯಾಪಾರ ಮಾಡುವ ಪುಂಡಲೀಕನ ದಾರುಣ ಅಸಹಾಯಕತೆಯ ನಡುವೆ ಮದುವೆ ಇಲ್ಲದೆ ಈ ಬೆಡಗಿಯರು ಮುದುಕಿಯರಾಗುತ್ತಾರೆಂದು ಆಸೆಯಿಂದ ಕನಿಕರ ಪಡುತ್ತ ಅರ್ಧ ಗ್ಲಾಸ್ ಸುಡು ಚಹಾ ಕುಡಿಯುವ ನೆಪದಲ್ಲಿ ಕಾಲ ಹರಣ ಮಾಡಿದವರು ಹಲವರಿದ್ದಾರೆ. ಒಬ್ಬಳು ಭಾರತಿ, ಇನ್ನೊಬ್ಬಳು ಮಾಲತಿ–ಯಾರು ಯಾರೆಂದು ಗುರುತಿಸಲಾರದ ಮಾಯಾವಿ ಸಹೋದರಿಯರು. ಒಬ್ಬಳೇ ದ್ವಿಪಾತ್ರದಲ್ಲಿ ನಟಿಸಿದಂತೆ. ಇಬ್ಬರೂ ಒಟ್ಟಿಗೆ ವ್ಯಾಪಾರಕ್ಕೆ ನಿಂತದ್ದಿಲ್ಲ; ಹಾಗಂತ ಅವಳಿಜವಳಿಗಳಲ್ಲ. ತಾಯಿ ಸುಗಂಧಿ ಕಣ್ಣಿಗೆ ಬೀಳುವವಳಲ್ಲ; ಪುಂಡಲೀಕ ಪಂಜಿ ಬಿಟ್ಟು ಇನ್ನೊಂದು ವಸ್ತ್ರ ಧರಿಸಿದ್ದನ್ನು ಯಾರೂ ನೋಡಿದಂತಿಲ್ಲ. ಸದಾ 'ಜಾಯ್ ಜಾಯ್' ಎನ್ನುತ್ತ ಮಂಜಾದ ಕಣ್ಣುಗಳನ್ನು ಕಿರಿದುಗೊಳಿಸಿ ಮಬ್ಬು ಮಸುಕಿನಲ್ಲಿ ನಾಣ್ಯ, ನೋಟುಗಳನ್ನು ಗುರುತಿಸಲು ಹೆಣಗಾಡುತ್ತ, ಹಳೆಯ ಪಟ್ಟಿಯಲ್ಲಿ ಪೆನ್ನೂರಿ, 'ಝೀರೊಕ್ಕೆ ಝೀರೊ' ಎಂದು ಲೆಕ್ಕ ಮಾಡುತ್ತ, ಕಪಾಟಿನ ಸನಿಹ ಜೀವ ಮಿಸುಕಾಡುವ ಮಣ್ಣಿನ ವಿಗ್ರಹದಂತೆ ಕೂತಿರುತ್ತಿದ್ದ.

ತಗ್ಗು ಮಾಡಿನಡಿ ಬಗ್ಗಿ ಬಾಂಕಿನತ್ತ ಸಾಗಿ ಮೂಲೆಯಲ್ಲಿ ಕುಳಿತರು. ಹಂಚಿನ ಕಾವು, ಪಕ್ಕದ ಎರಡೇ ಸರಳುಗಳ ಬಿಂಜಲು ಮಾಲೆಯ ಸಣ್ಣ ಕಿಟಕಿಯಿಂದ ನುಗ್ಗುತ್ತಿರುವ ಝಳಕ್ಕೆ ಬೆವರು ಜಿನುಗಿತು. ಗೋಡೆಗೆ ಮರಾಠಿ ಶ್ಲೋಕ ಬರೆದ ಮಹಾಲಸಾ ದೇವತೆಯ ಫೋಟೊವಿತ್ತು; ಅದರ ಪಕ್ಕ ಪೀಠದಲ್ಲಿ ತಲೆಗೆ ಕೇಸರಿ ವಸ್ತ್ರ ಹೊದ್ದು ಕುಳಿತ ಮಠದ ಗುರುಗಳ ಭಾವಚಿತ್ರ; ಝೀರೊ ಬಲ್ಬಿನ ವಾಯರಿಗೆ ಸುತ್ತಿದ ಬಿಂಜಲು ಮಾಲೆ ನೋಡುತ್ತ ಅನಂತ, "ಅತ್ತೆಗೆ ಬೇಜಾರಾತು. ಅಲ್ಲೆ ಉಣ್ಣಲಾಗಿತ್ತು"